# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/105/2015-16

ದಿನಾಂಕ:28.07.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಕರಿಬಸಮ್ಮ ಗಂಡ ಲೇಟ್ ರೇವಪ್ಪ<br>ಗ್ರಾಮ:-ವಟ್ಟಮನಹಳ್ಳಿ ತಾ:-ಹೆಚ್.ಬಿ.ಹಳ್ಳಿ<br>[ಎಲ್.ವೆಂಕಟೇಶನಾಯ್ಕ, ವಕೀಲರು, ಹ.ಬೊ.ಹಳ್ಳಿ] | 1.ಎಂ.ಹನುಮನಗೌಡ ತಂದೆ ಲೇಟ್ ಚನ್ನಬಸಪ್ಪ<br>2.ಶಿವನಗೌಡ್ರು ಪಾರ್ವತಮ್ಮ ಗಂಡ ಬಸಪ್ಪ<br>ಗ್ರಾಮ:-ವಟ್ಟಮನಹಳ್ಳಿ ತಾ:-ಹೆಚ್.ಬಿ.ಹಳ್ಳಿ<br>[ಹೆಚ್.ಡಿ.ಗುರುಬಸವರಾಜ, ವಕೀಲರು, ಕೂಡ್ಲಿಗಿ] |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ[ಎಕರೆಗಳಲ್ಲಿ] | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ವರ್ಲಹಳ್ಳಿ | 162/ಎ | 3-67 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ವರ್ಲಹಳ್ಳಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ವಟ್ಟಮನಹಳ್ಳಿ ಗ್ರಾಮದ ನಿವಾಸಿಯಾದ ಕರಿಬಸಮ್ಮ ಗಂಡ ಲೇಟ್ ರೇವಪ್ಪ ಇವರು ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆಯನ್ನು ಮಾಡಲು ದಿನಾಂಕ:27.01.2016 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸನ್ನು ದಿನಾಂಕ:01.02.2016 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:10.02.2016 ಲಿಖಿತವಾಗಿ ಆಕ್ಷೇಪಣೆಯನ್ನು ಎಂ.ಹನುಮನಗೌಡ ತಂದೆ ಲೇಟ್ ಚನ್ನಬಸಪ್ಪ ಇವರು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.74/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:03.05.2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:03.05.2016 ರಿಂದ 27.07.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಉಭಯ ಪಕ್ಷಕಾರರು ಮತ್ತು ಉಭಯ ಪಕ್ಷಕಾರರ ಪರ ವಕೀಲರು ಹಾಜರಾಗಿರುತ್ತಾರೆ. ಅರ್ಜಿದಾರರು ಹಾಜರಾಗಿ ಹೇಳುವಂತೆ; ತನ್ನ ಹೆಸರಿಗೆ ಪೌತಿವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ತಕರಾರುದಾರರ ಪರವಾಗಿ ಹೆಚ್.ಡಿ.ಗುರುಬಸವರಾಜ, ವಕೀಲರು, ಕೂಡ್ಲಿಗಿ ಇವರು ಹಾಜರಾಗಿ, ಶಿವನಗೌಡ್ರು ಪಾರ್ವತಮ್ಮ ಗಂಡ ಬಸಪ್ಪ ಇವರನ್ನು 2ನೇ ತಕರಾರುದಾರರನ್ನಾಗಿ ಪರಿಗಣಿಸಲು ಲಿಖಿತವಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ಅರ್ಜಿದಾರರ ಪರ ಎಲ್.ವೆಂಕಟೇಶನಾಯ್ಕ, ವಕೀಲರು, ಹ.ಬೊ.ಹಳ್ಳಿ ಇವರು ಹಾಜರಾಗಿ ಹೇಳುವಂತೆ; ಸದರಿ ಜಮೀನು ಅರ್ಜಿದಾರರ ತಂದೆಯವರ ಹೆಸರಿಗೆ ಪಟ್ಟಾ ಇದ್ದು, ಇವರ ಏಕೈಕ ಮಗಳು ಅಂದರೆ ಕರಿಬಸಮ್ಮ ಗಂಡ ಲೇಟ್ ರೇವಪ್ಪ ಇವರ ಹೆಸರಿಗೆ ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಮುಂದುವರೆದು, ಪ್ರಕರಣದಲ್ಲಿ ತಕರಾರುದಾರರ ಪರ ಹೆಚ್.ಡಿ.ಗುರುಬಸವರಾಜ, ವಕೀಲರು, ಕೂಡ್ಲಿಗಿ ಇವರು ಹಾಜರಾಗಿ ಲಿಖಿತವಾಗಿ ಹೇಳುವಂತೆ; ಅರ್ಜಿದಾರಳು ತನ್ನ ತಂದೆಯ ಪೌತಿ ವಾರಸಿಗಾಗಿ ಸಲ್ಲಿಸಿರುವ ಅರ್ಜಿಯು ಕಾನೂನು ಭಾಹೀರವಾಗಿದ್ದು, ಅಕ್ರಮವಾಗಿರುತ್ತದೆ. ಸದರಿ ಆಸ್ತಿಯ ಮೇಲೆ ಅರ್ಜಿದಾರಳಿಗೆ ಹಾಗೂ ಅವರ ಮೃತ ತಂದಗೆ ಯಾವುದೇ ರೀತಿಯಾದ ಹಕ್ಕು ಇರುವುದಿಲ್ಲ. ಹಾಗೂ ವಿವಾದಿತ ಜಮೀನಿಗೆ ಸ್ವಾಧೀನದಲ್ಲಿ ಎಂದಿಗೂ ಇರುವುದಿಲ್ಲ, ಬದಲಾಗಿ ವಿವಾದಿತ ಜಮೀನು 2ನೇ ತಕರಾರುದಾರರ ತಂದೆಗೆ ಪಾಲು ವಿಭಾಗ ಪ್ರಕಾರ ಬಂದ ಆಸ್ತಿಯಾಗಿದ್ದು, ಆಕೆಯೇ ವಿವಾದಿತ ಜಮೀನಿನ ವಾರಸುದಾರಳು ಹಾಗೂ ಮಾಲಿಕರು ಆಗಿರುತ್ತಾರೆ. ತನ್ನ ತಂದೆಯ ಕಾಲದಿಂದ ಆಕೆಯೇ ವಿವಾದಿತ ಭೂಮಿಯನ್ನು ಸ್ವಾಧೀನದಲ್ಲಿರುತ್ತಾಳೆ. ಪ್ರಕರಣದ ವಾಸ್ತವ ಸ್ಥಿತಿಯು ಈ ರೀತಿ ಇರುತ್ತದೆ.

1] ಅರ್ಜಿದಾರಳಾದ ಕರಿಬಸಮ್ಮಳ ತಂದೆ ಶಿವನಗೌಡ್ರು ಮೂಗನಗೌಡ್ರು ಹಾಗೂ 2ನೇ ಎದರುದಾರಳಾದ ಶಿವನಗೌಡ್ರು ಪಾರ್ವತಮ್ಮ ಇವರ ತಂದೆ ಶಿವನಗೌಡ್ರು ಶಿವಗೌಡ ಇಬ್ಬರು ಒಡಹುಟ್ಟಿದ ಸಹೋದರರು ಹಾಗೂ ಕೊಟ್ರಗೌಡ್ರು ಇವರ ಮಕ್ಕಳು. ಸದರಿ ಕೊಟ್ರಗೌಡ ಇವರಿಗೆ ವರ್ಲಹಳ್ಳಿ ಕಂದಾಯ ವ್ಯಾಪ್ತಿಗೆ ಸೇರಿದ ಸ.ನಂ.162ಎ ವಿಸ್ತೀರ್ಣ 3-67 ಎಕರೆ ಹಾಗೂ ಸ.ನಂ.163 ವಿಸ್ತೀರ್ಣ 3-73 ಎಕರೆ ಜಮೀನನ್ನು ಹೊಂದಿದ್ದರು.

2] ಸದರಿ ಕೊಟ್ರಗೌಡ ಇವರು ಮರಣದ ನಂತರ ಮಕ್ಕಳಾದ ಶಿವನಗೌಡ ಹಾಗೂ ಮೂಗನಗೌಡ ತಮ್ಮ ತಂದೆಯಿಂದ ಬಂದ ಆಸ್ತಿಯನ್ನು ಪಾಲುವಿಭಾಗ ಮಾಡಿಕೊಂಡರು ಆ ಪ್ರಕಾರ ಸ.ನಂ.162ಎ ವಿಸ್ತೀರ್ಣ 3-67 ಎಕರೆ ಶಿವನಗೌಡನ ಭಾಗಕ್ಕೆ ಹಾಗೂ ಸ.ನಂ.163 ವಿಸ್ತೀರ್ಣ 3-73 ಎಕರೆ ಮೂಗನಗೌಡನ ಭಾಗಕ್ಕೆ ಬಂದವು.

3] ದಿನಾಂಕ:21.03.1960 ರಂದು ಸದರಿ ಆರ್ಜಿದಾರಳ ತಂದೆ ಮೂಗನಗೌಡ ತನ್ನ ಭಾಗದ ಸ.ನಂ.163 ವಿಸ್ತೀರ್ಣ 3-73 ಎಕರೆ ಜಮೀನನ್ನು ತನ್ನ ಕುಟುಂಬದ ಖರ್ಚಿಗಾಗಿ ವಟ್ಟಮ್ಮನಹಳ್ಳಿ ಗ್ರಾಮದ ಶ್ರೀ ಮುರುವಿನ ಚನ್ನನಗೌಡ ತಂದೆ ವೀರನಗೌಡರಿಗೆ ನೋಂದಾಯಿತ ಕ್ರಯದ ಮೂಲಕ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯ ಪತ್ರದ ದೃಢೀಕೃತ ನಕಲನ್ನು ಮಾನ್ಯ ನ್ಯಾಯಾಲಯದ ಅವಗಹನೆಗೆ ಸಲ್ಲಿಸಲಾಗಿದೆ ಹಾಗೂ ಇ.ಸಿ.ಯನ್ನು ಸಹಾ ಸಲ್ಲಿಸಲಾಗಿದೆ.

4] 2ನೇ ತಕರಾರುದಾರಳ ತಂದೆ ಶಿವನಗೌಡ ಈತನ ಮರಣದ ನಂತರ ಆತನ ಒಬ್ಬಳೇ ಮಗಳಾದ 2ನೇ ತಕರಾಳುದಾರಳು ತನ್ನ ತಂದೆಯ ಭಾಗದ ವಿವಾದಿತ ಜಮೀನನ್ನು ತನ್ನ ಹೆಸರಿಗೆ ಪಟ್ಟಾ ಮಾಡಿಕೊಂಡಿರುತ್ತಾರೆ. ಹಾಗೂ ಇಲ್ಲಿಯವರೆಗೆ ಸದರಿ ಭೂಮಿಯ ಸ್ವಾಧೀನದಲ್ಲಿರುತ್ತಾಳೆ.

ಈ ಮೇಲಿನ ವಾಸ್ತವಾಂಶದ ಕಾರಣದಿಂದಾಗಿ ವಿವಾದಿತ ಜಮೀನು 2ನೇ ತಕರಾರುದಾರಳ ತಂದೆಯ ಭಾಗಕ್ಕೆ ಬಂದ ಜಮೀನಾಗಿದ್ದು ವಿವಾದಿತ ಜಮೀನಿಗೂ ಸಂಪೂರ್ಣ ಮಾಲಿಕಳು ಆಗಿರುತ್ತಾಳೆ ಎಂದು ಹಾಗೂ ಅವಳೇ ವಿವಾದಿತ ಜಮೀನಿನಲ್ಲಿ ತನ್ನ ತಂದೆಯ ಕಾಲದಿಂದ ಈ ವರೆಗೆ ಸ್ವಾಧೀನದಲ್ಲಿರುತ್ತಾಳೆ ಎಂಬುದು ದೃಢಪಟ್ಟಿರುತ್ತದೆ. ಆದರೆ ಅರ್ಜಿದಾರಳಿಗೆ ವಿವಾದಿತ ಜಮೀನಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಹಾಗೂ ಆಕೆಯು ಎಂದು ವಿವಾದತ ಜಮೀನಿನಲ್ಲಿ ಸ್ವಾಧೀನದಲ್ಲಿರುವುದಿಲ್ಲ. ಹಾಗೂ ಅರ್ಜಿದಾರಳ ತಂದೆ ಮೂಗನಗೌಡ ತನ್ನ ಭಾಗದ ಆಸ್ತಿಯನ್ನು ಈಗಾಗಲೇ ನೋಂದಾಯಿತ ಕ್ರಯದ ಮೂಲಕ ಮಾರಿಕೊಂಡಿರುವುದು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳಿಂದ ದೃಢಪಟ್ಟಿರುತ್ತದೆ.

ಆದುದರಿಂದ ಮಾನ್ಯ ನ್ಯಾಯಾಲಯದಲ್ಲಿ ಕೇಳುಕೊಳ್ಳುವುದೇನೆಂದರೆ ಅರ್ಜಿದಾರಳು ಸಲ್ಲಿಸಿರುವ ಅರ್ಜಿಯನ್ನು ವಜಾ ಮಾಡಬೇಕೆಂದು ಹಾಗೂ ಪಹಣಿಯಲ್ಲಿ ಅಕ್ರಮವಾಗಿ ಜಂಟಿಯಾಗಿ ನಮೂದಾಗಿರುವ ಅರ್ಜಿದಾರಳ ತಂದೆಯ ಹೆಸರನ್ನು ತೆಗೆದುಹಾಕಬೇಕೆಂದು ದಿನಾಂಕ:27.07.2016 ರಂದು ಲಿಖಿತವಾಗಿ ಕೋರಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು/ಪರ ವಕೀಲರು ಮತ್ತು ತಕರಾರುದಾರರು/ಪರ ವಕೀಲರು ಇವರು ನೀಡಿದ ಹೇಳಿಕೆಗಳನ್ನು ಹಾಗೂ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ಸದರಿ 2ನೇ ತಕರಾರುದಾರರು/ ಪರ ವಕೀಲರು, ವರ್ಲಹಳ್ಳಿ ಗ್ರಾಮದ ಸ.ನಂ.163 ವಿಸ್ತೀರ್ಣ 3-73 ಎಕರೆ ಜಮೀನಿನ ಋಣಭಾರ ರಾಹಿತ್ಯಾ ಪ್ರಮಾಣ ಪತ್ರ[ಇ.ಸಿ.] ಹಾಗೂ 1960ನೇ ಸಾಲಿನ ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲು ಪ್ರತಿಯನ್ನು ಪರಿಶೀಲಿಸಲಾಗಿ, ಸದರಿ ವರ್ಲಹಳ್ಳಿ ಗ್ರಾಮದ ಸ.ನಂ.163 ವಿಸ್ತೀರ್ಣ 3-73 ಎಕರೆಗೂ ಮತ್ತು ಈ ಪ್ರಕರಣಕ್ಕೂ ಸಂಬಂಧ ಇಲ್ಲದಿರುವುದು ಕಂಡುಬಂದಿರುತ್ತದೆ. ಪ್ರಸಕ್ತ ಸಾಲಿನ ಪಹಣಿ ಪತ್ರಿಕೆಯಲ್ಲಿ ಪೌತಿ ಪಟ್ಟಾದಾರರಾದ ಮೂಗನಗೌಡ ವಿ ಟಿ ಹಳ್ಳಿ ಇವರ ಹೆಸರಿಗೆ ಜಂಟಿ ಪಟ್ಟಾ ಇರುವುದು ಕಂಡುಬಂದಿರುತ್ತದೆ. ಹಾಗೂ ಅರ್ಜಿದಾರರ ವಂಶವೃಕ್ಷದ ಪ್ರಕಾರ ಸದರಿ ಜಂಟಿ ಪಟ್ಟಾದಾರರ ಹೆಂಡತಿಯಾದ ಕಾಳಮ್ಮ ಇವರು ಪೌತಿಯಾಗಿರು ಕಾರಣ ಇವರ ಏಕೈಕ ಮಗಳು ಕರಿಬಸಮ್ಮ ಗಂಡ ಲೇಟ್ ರೇವಪ್ಪ ಇವರ ಹೆಸರಿಗೆ ಪೌತಿ ವಾರಸು ಪ್ರಕಾರ ಜಂಟಿಯಾಗಿ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಎಂ.ಆರ್.ನಂ.74/2015-16 ರ ಪ್ರಕಾರ, ಪ್ರಕರಣದಲ್ಲಿ ವರ್ಲಹಳ್ಳಿ ಗ್ರಾಮದ ಸ.ನಂ.162/ಎ ವಿಸ್ತೀರ್ಣ 3-67 ಎಕರೆ ಜಮೀನಿಗೆ ಅರ್ಜಿದಾರರಾದ ಕರಿಬಸಮ್ಮ ಗಂಡ ಲೇಟ್ ರೇವಪ್ಪ ಇವರ ಹೆಸರಿಗೆ ಪೌತಿ ವಾರಸು ಪ್ರಕಾರ ಜಂಟಿಯಾಗಿ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:28.07.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

Recived
Advocate fd petitioner

28/7/16
[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,ಕೋಗಳಿ

17.8.16

ಪ್ರತಿಯನ್ನು:-

1. [illegible]
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಶುದ್ಧಪ್ರತಿ ಕಡತಕ್ಕೆ.